

ಚಿತ್ರ: ಎಂ.ಆರ್.ಮಧುಸೂದನ

'ಹುಲಿರಾಯ' ಮತ್ತೆ ಸುದ್ದಿಯಲ್ಲಿದ್ದಾನೆ. ಪ್ರತಿ ಸಲದಂತೆ ಈ ಸಲ ಕಳ್ಳಬೇಟೆ, ಅಂಗಾಂಗಗಳ ಸಾಗಾಣಿಕೆ, ಕ್ಷೀಣಿಸಿದ ಸಂಖ್ಯೆಯಿಂದಲ್ಲ! ಬದಲಾಗಿ, ಹೆಚ್ಚಾದ ತನ್ನ ಸಂತತಿಯ ಸಂಖ್ಯೆಯಿಂದ. ಕೇಂದ್ರ ಪರಿಸರ ಖಾತೆ ಸಚಿವ ಪ್ರಕಾಶ್ ಜಾವಡೇಕರ್ ಅವರು ಇತ್ತೀಚೆಗೆ ಬಿಡುಗಡೆ ಮಾಡಿರುವ ಹುಲಿ ಗಣತಿ ವರದಿಯ ಪ್ರಕಾರ, ದೇಶದಲ್ಲಿ ಹುಲಿಗಳ ಸಂಖ್ಯೆಯಲ್ಲಿ ಶೇಕಡಾ 30ರಷ್ಟು ಏರಿಕೆಯಾಗಿದೆ! 2010ರಲ್ಲಿ ನಡೆದ ಗಣತಿಯ ಅನ್ವಯ ಒಟ್ಟು ಹುಲಿಗಳ ಸಂಖ್ಯೆ 1706 ಇತ್ತು. ಈ ಬಾರಿ ಅದು 2226ಕ್ಕೆ ಏರಿದೆ. ವಿಶ್ವದ ಒಟ್ಟು ಹುಲಿಗಳ ಪೈಕಿ ಶೇಕಡಾ 70ರಷ್ಟು ಹುಲಿಗಳು ಭಾರತದಲ್ಲಿಯೇ ಇವೆ ಎನ್ನುವುದು ಸಂತಸದ ಸುದ್ದಿ. ಅದರಲ್ಲೂ ಕರ್ನಾಟಕ 'ನಂಬರ್ ಒನ್'.

ಹೆಚ್ಚಾದ ಈ ಹುಲಿಗಳ ಸಂಖ್ಯೆ ಏನನ್ನು ಸೂಚಿಸುತ್ತದೆ? ಕಾಡಿನಲ್ಲಿ ಹುಲಿಗಳ ಸಂಖ್ಯೆ ಹೆಚ್ಚಾದರೆ ನಾವೇಕೆ ಸಂತೋಷ ಪಡಬೇಕು? ಇದರಿಂದ ನಮಗೇನು ಲಾಭ? ಎನ್ನುವ ಜನ ಸಾಮಾನ್ಯನ ಪ್ರಶ್ನೆಗಳಿಗೆ ಉತ್ತರಿಸುವ ಸಮಯ ಇದಾಗಿದೆ.

## ಹುಲಿಯೇಕೆ ಬೇಕು?

ಇದು ಹುಲಿಗೆ ಮಾತ್ರವಲ್ಲದೇ ಯಾವುದೇ ವನ್ಯ ಜೀವಿಗೆ ಸಂಬಂಧಿಸಿದಂತೆ ಮತ್ತೆ ಮತ್ತೆ ಕೇಳಿಬರುವ ಪ್ರಶ್ನೆ. ಇದನ್ನು ನಾವು ಎರಡು ದೃಷ್ಟಿಯಿಂದ ನೋಡಬಹುದು. ಮೊದಲನೆಯದು ನ್ಯಾಯ ಮತ್ತು ನೈತಿಕತೆಯ ದೃಷ್ಟಿಕೋನ. ಈ ವಾದದ ಪ್ರಕಾರ ನಮಗಿಂತ ಸಹಸ್ರಾರು ವರ್ಷಗಳಷ್ಟು ಮೊದಲೇ ಈ ಭೂಮಿಗೆ ಬಂದ ಹುಲಿಗೆ, ಈ ಭೂಮಿಯ ಮೇಲೆ ಉಳಿಯುವ ಹಕ್ಕು ನಮ್ಮಷ್ಟೇ ಇದೆ. ಆದುದರಿಂದ ಅದರ ನೆಲೆಯನ್ನೂ, ಅದರ ಸಂತತಿಯನ್ನೂ ನಾಶಪಡಿಸುವ ಹಕ್ಕು ನಮಗಿಲ್ಲ ಎನ್ನುವುದು. ಇದು ಸರಿಯಾದ ವಾದವೇ ಆದರೂ ಕೂಡಾ, ಜನರ ಅಗತ್ಯಗಳು ಮತ್ತು ಪ್ರಾಣಿಗಳ ಸಂರಕ್ಷಣೆ ಎರಡೂ ಮುಖಾಮುಖಿ ಆದಾಗ ಈ ವಾದವನ್ನು ಕಡೆಗಣಿಸಲಾಗುತ್ತದೆ.

ಮತ್ತೊಂದು ದೃಷ್ಟಿಕೋನ ಎಂದರೆ, ವ್ಯಾವಹಾರಿಕವಾದ ಆರ್ಥಿಕ ದೃಷ್ಟಿಕೋನ. ಇದರ ಪ್ರಕಾರ ಹುಲಿ ಅಥವಾ ಯಾವುದೇ ವನ್ಯಜೀವಿ ನಮ್ಮ